4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ 216/2022

| | | |
|---|---|---|
| ಫಿರ್ಯಾದಿ | : | ಕರ್ನಾಟಕ ರಾಜ್ಯ ಸರ್ಕಾರ<br>ಪೊಲೀಸ್ ಉಪ ನಿರೀಕ್ಷಕರು,<br>ಕಾನೂನು ಮತ್ತು ಸುವ್ಯವಸ್ಥೆ,<br>ನಜರ್ ಬಾದ್ ಪೊಲೀಸ್ ಠಾಣೆ,<br>ಮೈಸೂರು. |
| | | **ವಿರುದ್ಧ** |
| ಆರೋಪಿತರು | : | ಶ್ರೀ ರಘು @ ರಘು ಎಂ ವಿ |

## <u>ದೋಷಾರೋಪಣೆ</u>

ನಾನು ಶ್ರೀ ಮಲ್ಲನಗೌಡ, 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಈ ಕೆಳಕಂಡ ಆರೋಪಿಯಾದ :-

ಶ್ರೀ ರಘು @ ರಘು ಎಂ ವಿ
ಬಿನ್ ವಾಸು ಕೆ
ಸುಮಾರು 38 ವರ್ಷ,
ವಾಸಃ-
ಮನೆ ನಂ.311, 7 ನೇ ಕ್ರಾಸ್,
ಕೆ ಸಿ ಲೇಔಟ್,
ಮೈಸೂರು ಸಿಟಿ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ಆರೋಪಿತರಾದ ನೀವು ಹಾಗೂ ಸಾಕ್ಷಿ-1 ರವರು ನಜರ್ ಬಾದ್ ಪೊಲೀಸ್ ಠಾಣಾ ಸರಹದ್ದು ಕೆ ಸಿ ನಗರದ 7 ನೇ ಕ್ರಾಸ್ ನಲ್ಲಿ ಮನೆ ನಂ. 311 ರಲ್ಲಿ ವಾಸವಾಗಿದ್ದು, ಸದರಿ ಮನೆಯು ಡ್ಯೂಪ್ಲೆಕ್ಸ್ ಮನೆಯಾಗಿದ್ದು, ಮನೆಯ ಕೆಳಭಾಗದಲ್ಲಿ ಆರೋಪಿತರಾದ ನೀವು ವಾಸವಿದ್ದು, ಸಾಕ್ಷಿ-1 ರವರು ಮೊದಲನೆ ಮಹಡಿಯಲ್ಲಿ ವಾಸವಾಗಿದ್ದು, ಸಾಕ್ಷಿ-1 ಮತ್ತು ಆರೋಪಿ ರಘು ಆದ ನೀವು ಆಸ್ತಿ

ವಿಚಾರವಗಿ ಆಗಾಗ ಗಲಾಟೆ ಮಾಡಿಕೊಳ್ಳುತ್ತಿದ್ದಿರಿ, ಆ ಬಗ್ಗೆ ಈ ಮೊದಲಿನಿಂದಲೂ ನಜರ್ ಬಾದ್ ಪೋಲೀಸ್ ಠಾಣೆಯಲ್ಲಿ ದೂರುಗಳು ದಾಖಲಾಗಿರುತ್ತವೆ, ಆರೋಪಿ ರಘು ಆದ ನೀವು ದ್ವೇಷವನ್ನಿಟ್ಟುಕೊಂಡು ದಿನಾಂಕ 01.03.2021 ರಂದು ಸಾಕ್ಷಿ–1 ರವರು ಕೆಲಸ ಮುಗಿಸಿ ರಾತ್ರಿ ಸುಮಾರು 10.45 ಗಂಟೆಗೆ ತಾವು ವಾಸವಾಗಿರುವ ಮೊದಲನೆ ಮಹಡಿಗೆ ಹೋಗಲು ಮೆಟ್ಟಿಲುಗಳನ್ನು ಹತ್ತುವಾಗ ಆರೋಪಿತರಾದ ನೀವು ಸಾಕ್ಷಿ–1 ರವರನ್ನು ಕೊಲೆ ಮಾಡುವ ಉದ್ದೇಶವನ್ನಿಟ್ಟುಕೊಂಡು ಸಾಕ್ಷಿ–1 ರವರು ಬರುವುದನ್ನು ಕಾಯ್ದುಕೊಂಡು, ಅವರು ಮೆಟ್ಟಿಲು ಹತ್ತುತ್ತಿದ್ದಾಗ ಸ್ಟೀಲ್ ಬಕೇಟ್‌ನಲ್ಲಿ ತುಂಬಿಕೊಂಡಿದ್ದ ಬಿಸಿ ಎಣ್ಣೆಯನ್ನು ಮೊದಲನೆ ಮಹಡಿಯಿಂದ ಸಾಕ್ಷಿ–1 ರವರ ತಲೆಯ ಮೇಲೆ ಸುರಿದು ಸಾಯಿಸಲು ಪ್ರಯತ್ನಿಸಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 307 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞನದೊಳಗೆ ಎಸಗಿರುತ್ತೀರಿ.

ಈ ಮೇಲ್ಕಂಡ ಆರೋಪದಡಿ ಆರೋಪಿತರಾದ ನೀವು ನನ್ನಿಂದ ಈ ದಿನ ದಿನಾಂಕ 09.01.2024 ರಂದು ಅಧಿವಿಚಾರಣೆಗೆ ಒಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ 216/2022

**ಫಿರ್ಯಾದಿ :** ಕರ್ನಾಟಕ ರಾಜ್ಯ ಸರ್ಕಾರ
ಪೊಲೀಸ್ ಉಪ ನಿರೀಕ್ಷಕರು,
ಕಾನೂನು ಮತ್ತು ಸುವ್ಯವಸ್ಥೆ,
ನಜರ್ ಬಾದ್ ಪೊಲೀಸ್ ಠಾಣೆ,
ಮೈಸೂರು.

**ವಿರುದ್ಧ**

**ಆರೋಪಿ** ಶ್ರೀ ರಘು @ ರಘು ಎಂ ವಿ

**ಆರೋಪಿಯ ಹೇಳಿಕೆ**

ಪ್ರಶ್ನೆ – 1) ಈಗ ನಿಮಗೆ ಓದಿ ತಿಳಿಸಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೇ ?

ಉತ್ತರ –

ಪ್ರಶ್ನೆ –2) ಸದರಿ ದೋಷಾರೋಪಣೆಗೆ ಸಂಬಂಧಿಸಿದಂತೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ನಡೆಯಬೇಕೆಂದು ಬಯಸುತ್ತೀರೋ ?

ಉತ್ತರ –

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ನಂತರ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು ಎಂದು ನಾನು ಈ ದಿನ ಅಂದರೆ, ದಿನಾಂಕ 09.01.2024 ರಂದು ದೃಢೀಕರಿಸುತ್ತೇನೆ )

( ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.